‘ಸುಧಾ’ ಜೊತೆಗಿನ ಓದುಗರ ಒಡನಾಟ

### ಬಾಲ್ಯದಿಂದಲೂ ಬಿಡದ ಆಕರ್ಷಣೆ

ಬಾಲ್ಯದಲ್ಲಿ ‘ಸುಧಾ’ಳಿಂದ ಆಕರ್ಷಿತರಾದವರಲ್ಲಿ ನಾನೂ ಒಬ್ಬ. ಡಾಬೂ, ಶೂಜ, ಮಜನೂರೊಂದಿಗೆ ಆರಂಭವಾದ ನನ್ನ ಓದಿನ ಪಯಣ ನಂತರ ಧಾರಾವಾಹಿಗಳ ಕಡೆ ತಿರುಗಿ, ಲೇಖನಗಳತ್ತಲೂ ವಾಲಿತು.

ಕಾಲೇಜಿನ ದಿನಗಳಲ್ಲಿ ‘ನೀವು ಕೇಳಿದಿರಿ’ ನನ್ನ ಮೆಚ್ಚಿನ ಅಂಕಣವಾಗಿತ್ತು. ಆಗ ನಾನು ಕೇಳಿದ್ದ ಒಂದು ಪ್ರಶ್ನೆ ‘ಸುಧಾ’ದಲ್ಲಿ ಪ್ರಕಟಗೊಂಡು ಬಹುಮಾನ ಕೂಡ ಅದಕ್ಕೆ ಬಂದದ್ದು ನನಗೆ ಬಹಳ ಹೆಮ್ಮೆ ಎನಿಸಿತ್ತು. ನನ್ನ ಬದುಕಿನ ಅವಿಭಾಜ್ಯ ಅಂಗವಾಗಿರುವ, ಪ್ರತಿ ಹಂತದಲ್ಲಿಯೂ ನನ್ನೊಂದಿಗೆ ಬಂದಿರುವ ‘ಸುಧಾ’ಳಿಗೆ ಧನ್ಯವಾದ.

—ಗೋ. ಶ್ರೀನಿವಾಸನ್, ಬೆಂಗಳೂರು

### ವಿಚಾರಶೀಲ ಲೇಖನಗಳ ಖನಿ

ಬಹಳ ವರ್ಷಗಳಿಂದಲೂ ನಾನು ‘ಸುಧಾ’ ಓದುಗ. ನನ್ನ ಮೊದಲ ಲೇಖನ ‘ನಿಮ್ಮ ಪುಟ’ದಲ್ಲಿ ಪ್ರಕಟವಾದಾಗ ಆನಂದದಿಂದ ಕುಣಿದಾಡಿದ್ದೆ. ಆ ಪ್ರಕಟಣೆಗೆ ಗೌರವ ಸಂಭಾವನೆಯೂ ದೊರೆಯಿತು. ಆ ಸಂಭಾವನೆ ನನಗೆ ಲಾಟರಿ ಹೊಡೆದಷ್ಟು ಖುಷಿಕೊಟ್ಟಿತ್ತು.

ಅದೇ ರೀತಿ ‘ನೀವು ಕೇಳಿದಿರಿ’ ವಿಭಾಗದಲ್ಲಿಯೂ ನನ್ನ ಪ್ರಶ್ನೆ ಪ್ರಕಟವಾಗಿ ಬಹುಮಾನ ಬಂದಿತ್ತು. ನಾನು ಯೌವನದ ದಿನಗಳನ್ನು ದಾಟಿ ಹಿರಿಯ ನಾಗರಿಕನಾಗಿದ್ದರೂ ‘ಸುಧಾ’ ಮಾತ್ರ ಚಿರಯೌವನೆ. ಮನರಂಜನೆ ಮಾತ್ರವಲ್ಲದೆ ಓದುಗರನ್ನು ವಿಚಾರವಂತರನ್ನಾಗಿಸುವ ‘ಸುಧಾ’ಗೆ ವಂದನೆ.

—ಬಿ. ಬಸವರಾಜ, ಹರಿಹರ

### ‘ಸುಧಾ’ಳಿಗೆ ಪರ್ಯಾಯವಿಲ್ಲ

ನನ್ನ ಚಿಕ್ಕಮ್ಮ ‘ಸುಧಾ’ ಆರಂಭವಾದ ದಿನದಿಂದಲೂ ಪತ್ರಿಕೆಯನ್ನು ಮನೆಗೆ ತರುತ್ತಿದ್ದರು. ಅಂದಿನಿಂದ ಓದುವುದು ತಪ್ಪಿಲ್ಲ. ನಡುವಿನಲ್ಲಿ ಹಲವು ಪತ್ರಿಕೆಗಳು ಕಾಣಿಸಿಕೊಂಡರೂ ‘ಸುಧಾ’ಳಿಗೆ ಪರ್ಯಾಯ ಆಗಲಿಲ್ಲ. ಬಾಲ್ಯದಲ್ಲಿ ಶೂಜ, ಡಾಬೂ, ಮಜನೂ ರೋಮಾಂಚಕ. ಎಚ್ಚೆಸ್ಕೆಯವರ ಅಂಕಣ, ವ್ಯಂಗ್ಯಚಿತ್ರಗಳು, ಧಾರಾವಾಹಿಗಳಲ್ಲಿ ಎಚ್.ಕೆ. ಅನಂತ್ ರಾವ್ ಅವರ ‘ಅಂತ’ ಮನೆಮಂದಿಯನ್ನು ತುದಿಗಾಲ ಮೇಲೆ ನಿಲ್ಲಿಸಿತ್ತು. ಇವತ್ತಿನ ಟೀವಿ, ಮೊಬೈಲ್ ಹಾವಳಿಗಳನ್ನೆಲ್ಲ ಎದುರಿಸಿ ನಮ್ಮ ಮನೆಯಲ್ಲಿ ತನ್ನದೇ ಹವಾ ಉಳಿಸಿಕೊಂಡಿದ್ದಾಳೆ ‘ಸುಧಾ’.

—ಬಿರ್ತಿ ಸುರೇಶ್, ಬ್ರಹ್ಮಾವರ




### ಅಭಿಮಾನ, ರೋಮಾಂಚನ

‘ಸುಧಾ’ ಪ್ರಾರಂಭದ ದಿನದಿಂದಲೂ ನಮ್ಮ ಕುಟುಂಬಕ್ಕೆ ಪತ್ರಿಕೆಯ ನಂಟು ಬೆಸೆದುಕೊಂಡಿತ್ತು. ನನ್ನ ತಂದೆ ಕೃಷ್ಣಮೂರ್ತಿ ಪುರಾಣಿಕರು. ಅವರ ನಾಲ್ಕು ಕಾದಂಬರಿಗಳು, ‘ಹೇಮಂತನ ಮಗಳು’, ‘ಹೇಮಲತೆ’, ‘ಕಲಿತವಳು’, ‘ಭಾಗ್ಯವಂತರು’ ಧಾರಾವಾಹಿಯಾಗಿ ‘ಸುಧಾ’ದಲ್ಲಿ ಪ್ರಕಟವಾದವು. ಇದರೊಂದಿಗೆ ವಿವಿಧ ರೀತಿಯ ಸುಮಾರು 250 ಕಥೆಗಳನ್ನು ಬರೆಯಲು ‘ಸುಧಾ’ ಪ್ರೇರೇಪಣೆ ನೀಡಿತ್ತು.

ತಂದೆಯವರು ಕಥೆ ಬರೆದ ನಂತರ ಪತ್ರಿಕೆಗೆ ಕಳಿಸುವ ಜವಾಬ್ದಾರಿ ನನ್ನದಾಗಿತ್ತು. ಬೇರೆ ಪತ್ರಿಕೆಗಾಗಿ ಬರೆದ ಕಥೆಯನ್ನೂ ‘ಸುಧಾ’ಗೆ ಕಳಿಸಿಬಿಡುತ್ತಿದ್ದೆ. ಅದು ನನ್ನ ಅಭಿಮಾನವಾಗಿತ್ತು.

ಗೋಕಾಕ ಊರಿಗೆ ‘ಸುಧಾ’ ಗುರುವಾರ ಬರುತ್ತಿತ್ತು. ನಾನು ಆ ದಿನವೇ ಬಸ್‌ಸ್ಟ್ಯಾಂಡಿಗೆ ಹೋಗಿ ಪತ್ರಿಕೆ ತಂದು ಓದಿ ತಂದೆಯವರ ಟೇಬಲ್ ಮೇಲಿಡುತ್ತಿದ್ದೆ. ನನ್ನ ಅಕ್ಕಂದಿರು ಅಣ್ಣಂದಿರು ಗುರುವಾರವೇ ಓದಿ ಮುಗಿಸುತ್ತಿದ್ದರು.

‘ಸುಧಾ’ ಒಂದು ಮನರಂಜನೆಯ ಪತ್ರಿಕೆ ಮಾತ್ರವಾಗದೇ ಜ್ಞಾನದ ಪತ್ರಿಕೆ ಆಗಿತ್ತು. ದಿನಕರ ದೇಸಾಯಿ ಅವರ ಚುಟುಕುಗಳು, ವಾರದ ವ್ಯಕ್ತಿ ಮುಂತಾದ ಅಂಕಣಗಳು ಓದುಗರ ಮನಸ್ಸನ್ನು ಗೆದ್ದಿದ್ದವು. ನಮ್ಮ ಕುಟುಂಬದೊಂದಿಗೆ ‘ಸುಧಾ’ ಸಂಬಂಧ ಇನ್ನೂ ಆತ್ಮೀಯವಾಗಿ ಮುಂದುವರೆದಿದೆ.

—ಆನಂದ ಪುರಾಣಿಕ, ಬೆಳಗಾವಿ

### ಹಾದು ಹೋಗುವ ನೆನಪುಗಳು

ನಾನು ‘ಸುಧಾ’ ಓದಲು ಪ್ರಾರಂಭಿಸಿ ಐದು ದಶಕಗಳೇ ಕಳೆದಿವೆ. ಈಗಲೂ ಧಾರಾವಾಹಿಗಳು, ನೀವು ಕೇಳಿದಿರಿ, ನಕ್ಕುಬಿಡಿ, ಪದಬಂಧ, ನಗೆಹೊನಲು ಎಲ್ಲವನ್ನೂ ಓದುತ್ತೇನೆ. ಚಿಕ್ಕವರಿದ್ದಾಗ ಓದುತ್ತಿದ್ದ ಪುಟಾಣಿ ಪುಟ್ಟಿಯ ಚಿತ್ರಗಳು ಕಣ್ಣಮುಂದೆ ಹಾದುಹೋಗುತ್ತವೆ. ಮೊದಲ ಪುಟದಿಂದ ಕೊನೆಯ ಪುಟದವರೆಗೂ ಓದಿಸಿಕೊಂಡು ಹೋಗುವ ‘ಸುಧಾ’ ನನ್ನ ಪ್ರೀತಿಯ ವಾರಪತ್ರಿಕೆ.

—ನಂದಿನಿ ಆರ್. ರಾವ್, ಬೆಂಗಳೂರು




### ಮಹತ್ತರ ಪಾತ್ರ ವಹಿಸಿದ ಪತ್ರಿಕೆ

‘ಸುಧಾ’ ಅವತರಿಸಿದ ದಿನದಿಂದಲೂ ನಮ್ಮ ಕುಟುಂಬದ ಒಡನಾಡಿಯಾಗಿದ್ದಾಳೆ. ಆಗ ನಮ್ಮದೇ ಪುಟ್ಟ ಪತ್ರಿಕಾ ವಿತರಣಾ ಮಳಿಗೆ ಇದ್ದುದೂ ಒಂದು ಕಾರಣ. ಆ ದಿನಗಳಲ್ಲಿ ಸುಮಾರು ಆರೇಳು ವರ್ಷದ ನನ್ನನ್ನು ಮಹಾ ಯಕ್ಷಿಣಿಗಾರ ಮಾಂಡ್ರೆಕ್, ಫಾಂಟಮ್, ಡಾಬೂ ಚಿತ್ರ ಕಥಾನಕಗಳ ಮೂಲಕ ಸೆಳೆದಿಟ್ಟುಕೊಂಡಿದ್ದವು.

ನಿರಕ್ಷರಿಯಾದ ನನ್ನಮ್ಮ ಕೂಡ ಗುರುವಾರ ‘ಸುಧಾ’ ಕಾಣದಿದ್ದರೆ ‘ಇನ್ನೂ ಯಾಕ ಬಂದಿಲ್ಲವಾ...’ ಎನ್ನುವಂತೆ ಕಾಯುವುದು ತಪ್ಪಿಲ್ಲ. ನೂರಾರು ಸವಿನೆನಪುಗಳು ನಮ್ಮನ್ನು ಆವರಿಸಿದ್ದರೂ ಮಕ್ಕಳ ವಿಭಾಗದ ಜಿ.ಪಿ. ರಾಜರತ್ನಂ ಅವರ ಲೇಖನಗಳು, ಗುರುಗಳಾದ ಸಂಪಟೂರ್ ವಿಶ್ವನಾಥರ ವೈಜ್ಞಾನಿಕ ಬರಹಗಳು, ನೀವು ಕೇಳಿದಿರಿ ವಿಭಾಗದ ಮೊನಚಾದ ಹಾಸ್ಯಭರಿತ ಚುಟುಕುತ್ತರಗಳು ಕನ್ನಡ ಸಾಹಿತ್ಯದ ಎಲ್ಲ ದಿಗ್ಗಜರ ಧಾರಾವಾಹಿಗಳು ನಮ್ಮನ್ನು ಓರ್ವ ಓದುಗನಾಗಿ, ಸಾಹಿತ್ಯಪ್ರೇಮಿಯಾಗಿ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದವು.

—ಎಂ. ಶಂಕರ್, ಬೆಂಗಳೂರು

### ಅದೇ ಆತ್ಮೀಯತೆ...

ಪುಟ್ಟ ಪುಟ್ಟ ಹೆಜ್ಜೆಯಿಡುತ್ತ ಬಂದ ‘ಸುಧಾ’ಳನ್ನು ಎತ್ತಿ ಆಡಿಸಿದ ಸುಂದರ ನೆನಪು. ‘ಸುಧಾ’ ಪ್ರತಿ ಅಂಕಣವೂ ವಿಶೇಷವೇ. ನಿವೃತ್ತಿ ಹೊಂದಿದ ನಂತರ ಈಗ ಮತ್ತಷ್ಟು ಪ್ರೀತಿ, ಅದೇ ಗೆಳೆತನ, ಅದೇ ಗಾಢ ಆತ್ಮೀಯತೆ...

—ನಾಗರತ್ನ ಗೋವಿಂದ್, ಬೆಂಗಳೂರು